## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ರಾಷ್ಟ್ರಪ್ರೇಮಿಗಳ ದಿನವಾಗಲಿ

ಪ್ರಪಂಚದ ಕೆಲವೊಂದು ರಾಷ್ಟ್ರಗಳು ಫೆಬ್ರುವರಿ 14 ರಂದು ಪ್ರೇಮಿಗಳ ದಿನಾಚರಣೆಗಾಗಿ ಕಾಯುತ್ತಿವೆ.ಅಂತಹ ರಾಷ್ಟ್ರಗಳ ಯುವಕರ ಪಟ್ಟಿಯಲ್ಲಿ ಭಾರತಿಯ ಯುವಕರು ಸೇರುತ್ತಿರುವುದು ವಿಸ್ಮಯ.ಪ್ರೇಮಿಗಳ ದಿನದ ರೂವಾರಿ ರೋಮ್ ಮೂಲದ ಸೇಂಟ್ ವ್ಯಾಲಂಟೈನ್.ಈತ ಪ್ರೇಮಿಗಳನ್ನ ಒಂದುಗೂಡಿಸುವ ಕಾರ್ಯ ಮಾಡುತ್ತಿದ್ದನು. ಹಾಗಾಗಿ ಈತನ ಸವಿ ನೆನಪಿಗಾಗಿ ಕೆಲವೊಂದು ರಾಷ್ಟ್ರಗಳು ಈ ದಿನವನ್ನು ಆಚರಿಸುತ್ತವೆ. ಯುವ ಜನತೆ ಪ್ರೇಮಿಗಳ ದಿನವೆಂದರೆ ಕೇವಲ ಪ್ರಿಯತಮ-ಪ್ರಿಯತಮೆಯರಿಗೆ ಮಾತ್ರ ಮೀಸಲು ಎಂಬ ತಪ್ಪು ಅಭಿಪ್ರಾಯವನ್ನು ಮುಂದುವರಿಸಿಕೊಂಡು ಹೋಗುತ್ತಿರುವುದು ಒಂದು ದುರಂತವೇ ಎನ್ನಬಹುದು. ಫೆಬ್ರುವರಿ 14 ಕ್ಕಾಗಿ ಯುವ ಜನತೆ ತುಂಬಾ ಕುತೂಹಲದಿಂದ ಕಾಯುತ್ತಿದೆ.ವಿಶೇಷ ವಾಗಿ ಕಾಲೇಜ್ ಓದುವ ವಿದ್ಯಾರ್ಥಿಗಳಂತೂ ಈ ದಿನಕ್ಕಾಗಿ ತುದಿಕಾಲ ಮೇಲೆ ನಿಂತಿರುತ್ತಾರೆ. ತಮ್ಮ ಪ್ರೀತಿ ಪಾತ್ರರಿಗೆ ತಮ್ಮ ಪ್ರೀತಿಯ ವಿಚಾರ ತಿಳಿಸುವ ಹಂಬಲ.ಪ್ರೇಮಿಗಳ ದಿನ ಪ್ರೇಮಿಗಳಿಗಳಿಗಷ್ಟೇ ಸೀಮಿತ ಅಲ್ಲ. ಪ್ರೀತಿಯನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ಪ್ರೀತಿ ಪಾತ್ರ ಕುಟುಂಬ ಸದಸ್ಯರು, ಸ್ನೇಹಿತರು ಮತ್ತು ತಮ್ಮ ಪ್ರೀತಿ ಪಾತ್ರ ಪ್ರಾಣಿ- ಪಕ್ಷಿಗಳಿಗೆ ಹೀಗೆ ತಾವು ಪ್ರೀತಿಸುವ ಪ್ರತಿ ಅಂಶಗಳಿಗೂ ನಮ್ಮ ಪ್ರೀತಿಯನ್ನು ವ್ಯಕ್ತಪಡಿಸುವ ಸುದಿನವಿದು ಎಂದು ಪರಿಗಣಿಸಲಿ. ಇವುಗಳೆಲ್ಲದರ ಜತೆಗೆ ನಾವು ಈ ದಿನವನ್ನು ರಾಷ್ಟ್ರ ಪ್ರೇಮ ದಿನವಾಗಿ ಆಚರಿಸಬಹುದು. ಎಲ್ಲಿ ಏನೇ ನಡೆಯಲಿ, ಭಾರತೀಯರಾದ ನಮಗೂ ನಮ್ಮದೇ ಆದ ರೂಢಿ ಸಂಪ್ರದಾಯಗಳಿದ್ದು, ಒಮ್ಮೆಯಾದರೂ ಫೆಬ್ರವರಿ 14 ರ ಪ್ರೇಮಿಗಳ ದಿನವನ್ನು ರಾಷ್ಟ್ರಪ್ರೇಮಿಗಳ ದಿನವನ್ನಾಗಿ ಆಚರಿಸುವ ಮೂಲಕ ಜಗತ್ತೇ ಭಾರತಿಯರತ್ತ ತಿರುಗಿ ನೋಡುವ ಹಾಗೆ ಮಾಡಬೇಕಿದೆ. ಈ ವಿಚಾರದಲ್ಲಿ ರಾಷ್ಟ್ರದ ಯುವ ಜನತೆಯ ಪಾತ್ರ ಮಹತ್ವವಾದದ್ದು.

**ಸುನೀಲ್ ಪಾಟೀಲ್ ಕೊಪ್ಪಳ**

### ಸಾಲದ ಹೊರೆ ಯಾರಿಗೆ?




ರಾಜ್ಯ ಸರಕಾರದ ಸರಣಿ ಭಾಗ್ಯಗಳ ಭಾರ ಹೊತ್ತಿರುವ ನಮ್ಮ ರಾಜ್ಯ ಈಗ ಸಾಲವನ್ನು ಹೊರಲು ಸಿದ್ಧವಾಗಬೇಕಿದೆ. ಯಾಕೆಂದರೆ ವರ್ಷದಿಂದ ವರ್ಷಕ್ಕೆ ಕರ್ನಾಟಕದ ಸಾಲ ಹೆಚ್ಚಾಗುತ್ತಿದ್ದು, ನಮ್ಮ ಹಣಕಾಸಿನ ನಿರ್ವಹಣೆಯ ಹಣೆ ಬರಹ ತಿಳಿಯುತ್ತದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಇದ್ದ ಸಾಲ 1.12 ಲಕ್ಷ ಕೋಟಿ . ಆದರೆ ಅವರ ಅಧಿಕಾರಾವಧಿಯ ಕೊನೆಯಲ್ಲಿ ಸಾಲ 2.42 ಲಕ್ಷ ಕೋಟಿ ತಲುಪುವ ನಿರೀಕ್ಷೆಯಿದೆ. ಇದಕ್ಕೆ ಮೂಲ ಕಾರಣವೆಂದರೆ ಸರಕಾರದ ಭಾಗ್ಯಗಳ ಭರವಸೆ. ಇಂದಿರಾ ಕ್ಯಾಂಟಿನ್, ಮುಖ್ಯಮಂತ್ರಿ ಅನಿಲ ಭಾಗ್ಯ, ಲ್ಯಾಪ್ ಟಾಪ್ ಭಾಗ್ಯ ಹೀಗೆಯೇ ಹೇಳುತ್ತಾ ಹೋದರೆ ನಮ್ಮದು ಭಾಗ್ಯದ ನಾಡು. ಆದರೆ ತಿಳಿಯಬೇಕಾದ ವಿಷಯವೆಂದರೆ ಈ ಭಾಗ್ಯಗಳ ಸಾಲದ ಭಾರ ಹೊರುವವರು ಕರ್ನಾಟಕದ ಸತ್ ಪ್ರಜೆಗಳೆ ಎಂಬುದನ್ನು. ಸರಕಾರ ಅನವಶ್ಯಕವಾಗಿ ಭಾಗ್ಯಗಳ ಪ್ರವಾಹ ಹರಿಸಿ ಪ್ರತಿ ಪ್ರಜೆಯ ಮೇಲೆ 38 ಸಾವಿರ ಸಾಲ ಹೊರಿಸುತ್ತದೆಯಂತೆ. ಈ ಸಾಲವನ್ನು ಪ್ರಜೆಗಳು ಹೊರಲೇ ಬೇಕು ಏಕೆಂದರೆ ಪ್ರಜೆಗಳು ಮೊದಲೇ ಸರಕಾರದ ಕಾರ್ಯ ವೈಖರಿಯನ್ನು ಸದಾ ಪ್ರಶ್ನಿಸುತ್ತಿದ್ದರೆ ಈ ಗತಿ ಬರುತ್ತಿ ರಲಿಲ್ಲ. ಹೇಳುವದಾದರೆ ಯಾವುದನ್ನೂ ಕೇಳದ ಪ್ರಜೆಗಳು ಯಾವುದನ್ನೂ ಹೇಳದ ಪ್ರಭುಗಳು ಕೂಡಿ ರಾಜ್ಯದ ರಾಜಕೀಯವನ್ನು ಅಜ್ಞಾತ ವಾಸದಂತೆ ಕಳೆಯುತ್ತಿದ್ದಾರೆ. ರಾಜ್ಯದ ಭವಿಷ್ಯದ ಭಾಗ್ಯ ಮತದಾರರ ಕೈಯಲ್ಲಿದೆ. ಅರಿತರೆ ಒಳಿತು.

**ಶಿವನಗೌಡ ಎಸ್. ಮಾಡಗಿ**

## ಭಟ್ಟರ್ ಸ್ಕಾಚ್

**● ಬಾಣ ಭಟ್ಟ**

**● ಶಂಕರ ಮತ್ತಿಕೇರಿ, ಸಾಗರ**
ರಜನಿಕಾಂತ ಪಕ್ಷದ ಭವಿಷ್ಯವೇನು ?
**-ರಜನಿಕಾಂತ ಅವರು ಮತಗಳ ಆಯಸ್ಕಾಂತವಾಗಬೇಕು !**

**● ಚಂದ್ರಶೇಖರ ಪಕ್ಕದಹಳ್ಳಿ, ಮಂಡ್ಯ**
ಮೋದಿಯವರಿಗಿಂತ, ಸಿದ್ರಾಮಯ್ಯನವರೇ ಮೇಲು ಅಂತ ರಾಹುಲ್ ಹೇಳಿದ್ದಾರಲ್ಲ ?
**-ಈ ಪ್ರಶ್ನೆಗೆ ಉತ್ತರಿಸುವಂತೆ ರಾಹುಲ್ ಅವರನ್ನೇ ಕೇಳಿಕೊಳ್ಳುತ್ತೇನೆ !**

**● ಜಾಹ್ನವಿ ರಾವ್, ಶಂಕರಪುರಂ**
ಭಟ್ರೇ, ಜ್ಯೋತಿಷಿಗಳನ್ನು ನಂಬಬಹುದಾ ?
**-ಅವರನ್ನು ಕೇಳಬಾರದೇ ?**

**● ಸುಲೋಚನ ಅಡಿಗ, ಮೈಲತ್ತೂರು**
ಬೆಂಗಳೂರಿನಲ್ಲಿ ಕನ್ನಡಕ್ಕೆ ಕುತ್ತು ಬಂದಿದೆಯಾ ಸಾರ್ ?
**-ಆದರೆ ಯಾರಿಗೂ ಇಂಗ್ಲಿಷ್ ಸರಿಯಾಗಿ ಬರೊಲ್ಲ ಎಂಬುದೂ ಅಷ್ಟೇ ನಿಜ !**

**● ಕಾರ್ತಿಕ್ ಎಂ. ದಾವಣಗೆರೆ**
ಮದುವೆ ಮನೆಯಲ್ಲಿ ರಾಷ್ಟ್ರಗೀತೆ ಹಾಡಬಹುದಾ ?
**- ಶೋಕಗೀತೆಯನ್ನು ಬಿಟ್ಟು ಉಳಿದೆಲ್ಲವನ್ನೂ ಹಾಡಬಹುದು !**

**● ರಾಮದಾಸ ಪೈ, ಯಶವಂತಪುರ**
ವೀರಪ್ಪ ಮೊಯ್ಲಿ ಸಾಹಿತ್ಯದ ಬಗ್ಗೆ ನಿಮಗೆ ಪೂರ್ವಗ್ರಹ ಇದ್ದಂತಿದೆಯಲ್ಲ ?
**-ಪೂರ್ವಗ್ರಹವಲ್ಲ ಅದು, ಅಪರಿಗ್ರಹ !**

**● ಚೈತ್ರಾ, ಮಲ್ಲೇಶ್ವರ**
ಹುಡುಗಿಯರು ಬಿಯರ್ ಕುಡಿಯೋದು ತಪ್ಪಾ ?
**- ಗುಂಡಾಭಟ್ಟರ ಪ್ರಕಾರ, ಕುಡಿಯದಿರುವುದೇ ತಪ್ಪು !**

**● ಸದಾನಂದ ಎಂ. ಶಾಸ್ತ್ರಿ, ಯಲ್ಲಾಪುರ**
ಪದೇಪದೆ ತವರಿಗೆ ಹೋಗ್ತೇನೆ ಅಂತ ಹೆದರಿಸುವ ಹೆಂಡತಿಯನ್ನು ಹೇಗೆ ನಿಭಾಯಿಸುವುದು ?
**- ಅದು ಬೆದರಿಕೆ ಅಲ್ಲ ಮಾರಾಯ, ಉಪಕಾರ !**

**● ಶ್ರೀಪತಿ ಮೂಡಲಗಿರಿ, ಶಿವಮೊಗ್ಗ**
ಪಕ್ಷ ಹಣಕೊಟ್ಟರೆ ಚುನಾವಣೆಗೆ ನಿಲ್ತೇನೆ ಅಂತ ಕಾಗೋಡು ತಿಮ್ಮಪ್ಪ ಹೇಳಿದ್ದಾರಲ್ಲ ?
**-ದುಡಿದದ್ದೆಲ್ಲವನ್ನೂ ಪಕ್ಷಕ್ಕೇ ಕೊಟ್ಟವರಂತೆ ಹಾಗೆ ಹೇಳಿರಬೇಕು !**

**● ಶ್ರೀನಿವಾಸ ಕೆ.ಪಿ. ಸಹಕಾರನಗರ**
ನನಗೆ ನೀನು ಇಷ್ಟ ಎಂದು ಪ್ರೀತಿಯನ್ನು ಹುಡುಗಿಯರ ಮುಂದೆ ನಿವೇದಿಸಿಕೊಳ್ಳುವುದು ಹೇಗೆ ?
**-ವಾಟ್ಸಪ್ ಮಾಡಿ ಸುಮ್ನಿರು. ಓದಿದ್ದು ಗೊತ್ತಾಗುತ್ತೆ, ಉತ್ತರ ಬರದಿದ್ದರೆ, ಮರಳಿ ಯತ್ನವ ಮಾಡು ಬೇರೆಯವರ ಜತೆ !**

# ಶಿವನಿಗೆ ಶಿವರಾತ್ರಿಯಂದೇ ವಿಶೇಷ ಪೂಜೆಯೇಕೆ?

**ಭಕ್ತಿ**

ಸಂಕಲನ: ಮೋಹನ ಗೌಡ, ಬೆಂಗಳೂರು

editoped@vishwavani.news

ಮಾಘ ಕೃಷ್ಣತ್ರಯೋದಶಿಯನ್ನು ಮಹಾಶಿವರಾತ್ರಿ ಎನ್ನುತ್ತಾರೆ. ಈ ವ್ರತವು ಕಾಮ್ಯ ಮತ್ತು ನೈಮಿತ್ತಿಕ ಹೀಗೆ ಎರಡು ವಿಧವಾಗಿದೆ. ಉಪವಾಸ, ಪೂಜೆ ಮತ್ತು ಜಾಗರಣೆ ಇವು ಈ ವ್ರತದ ಮೂರು ಅಂಗಗಳಾಗಿವೆ. ಶಿವನು ಈ ವ್ರತದ ಪ್ರಧಾನ ದೇವತೆಯಾಗಿದ್ದಾನೆ. ಮಹಾ ಶಿವರಾತ್ರಿಯ ದಿನ ಶಿವತತ್ತ್ವವು ನಿತ್ಯಕ್ಕಿಂತ 1000 ಪಟ್ಟು ಹೆಚ್ಚು ಕಾರ್ಯ ನಿರತವಾಗಿರುತ್ತದೆ. ಶಿವತತ್ತ್ವದ ಲಾಭವು ಹೆಚ್ಚು ಪ್ರಮಾಣದಲ್ಲಿ ಸಿಗಲು ಮಹಾಶಿವರಾತ್ರಿಯ ದಿನ ಭಾವಪೂರ್ಣವಾಗಿ ಶಿವನ ಪೂಜೆ- ಅರ್ಚನೆ ಹಾಗೂ ಓಂ ನಮಃ ಶಿವಾಯ ನಾಮಜಪವನ್ನು ಮಾಡಬೇಕು. ಈ ವರ್ಷ ಮಹಾಶಿವರಾತ್ರಿಯು ಫೆಬ್ರುವರಿ 13 ರಂದು ಇದೆ.

ಶಿವನಿಗೆ ಬಿಲ್ವಪತ್ರೆಯನ್ನು ಯಾಕೆ ಅರ್ಪಿಸುತ್ತಾರೆ? ಮತ್ತು ಅದರ ಮಹತ್ವವೇನು?

**ಬಿಲ್ವಪತ್ರೆ**: ಶಿವಲಿಂಗದಲ್ಲಿ ಆಹತ (ಶಿವಲಿಂಗದ ಮೇಲೆ ಬೀಳುವ ನೀರಿನ ಘರ್ಷಣೆಯಿಂದ ಉಂಟಾಗುವ) ನಾದ ಮತ್ತು ಅನಾಹತ (ಸೂಕ್ಷ್ಮ) ನಾದ ಹೀಗೆ 2 ಪವಿತ್ರಕಗಳಿರುತ್ತವೆ. ಈ ಎರಡು ಪವಿತ್ರಕಗಳು ಮತ್ತು ಬಿಲ್ವಪತ್ರೆಯಲ್ಲಿನ ಪವಿತ್ರಕ ಹೀಗೆ ಮೂರು ಪವಿತ್ರಕಗಳನ್ನು ಆಕರ್ಷಿಸಲು 3 ಎಲೆಗಳುಳ್ಳ ಬಿಲ್ವಪತ್ರೆಯನ್ನು ಶಿವನಿಗೆ ಅರ್ಪಿಸುತ್ತಾರೆ. ಎಳೆಯ ಬಿಲ್ವಪತ್ರೆಯು ಆಹತ (ನಾದಭಾಷೆ) ಮತ್ತು ಅನಾಹತ (ಪ್ರಕಾಶ ಭಾಷೆ) ಧ್ವನಿಗಳನ್ನು ಒಂದುಗೂಡಿಸಬಲ್ಲದು. ಬಿಲ್ವಪತ್ರೆಯನ್ನು ಶಿವಲಿಂಗದ ಮೇಲೆ ಕೆಳಮುಖವಾಗಿಟ್ಟು ತೊಟ್ಟನ್ನು ನಮ್ಮ ಕಡೆಗೆ ಬರುವಂತೆ ಅರ್ಪಿಸುತ್ತಾರೆ. ಹೀಗೆ ಮಾಡುವುದರಿಂದ ಮೂರೂ ಎಲೆಗಳಿಂದ ಒಟ್ಟಿಗೆ ಬರುವ ಶಕ್ತಿಯು ನಮ್ಮ ಕಡೆಗೆ ಬರುತ್ತದೆ. ಈ ಮೂರೂ ಪವಿತ್ರಕಗಳ ಒಟ್ಟು ಗೂಡಿದ ಶಕ್ತಿಯಿಂದ ತ್ರಿಗುಣಗಳು ಕಡಿಮೆಯಾಗಲು ಸಹಾಯವಾಗುತ್ತದೆ.

ಬಿಲ್ವಪತ್ರೆಯಲ್ಲಿ ಶೇ. 2 ರಷ್ಟು ಶಿವತತ್ತ್ವವಿರುತ್ತದೆ. ಶಿವಲಿಂಗಕ್ಕೆ ಬಿಲ್ವಪತ್ರೆಯನ್ನು ಅರ್ಪಿಸಿದಾಗ ಬಿಲ್ವಪತ್ರೆಯ ತುಂಬಿ (ತೊಟ್ಟಿ)ನಲ್ಲಿ ಸಗುಣ ಶಿವತತ್ತ್ವವು ಜಾಗೃತವಾಗಿ ಅದರಿಂದ ಚೈತನ್ಯ ಮತ್ತು ಶಿವತತ್ತ್ವವು ಪ್ರಕ್ಷೇಪಿತವಾಗತೊಡಗುತ್ತದೆ. ಬಿಲ್ವವು ಶಿವಲಿಂಗದಲ್ಲಿರುವ ಶೇ. 5 (20) ರಷ್ಟು ಶಿವತತ್ತ್ವವನ್ನು ತನ್ನಲ್ಲಿ ಹೀರಿಕೊಳ್ಳುತ್ತದೆ. ನೀರಿನಲ್ಲಿ, ಧಾನ್ಯಗಳಲ್ಲಿ ಶಿವತತ್ತ್ವದಿಂದ ತುಂಬಿದ ಬಿಲ್ವಪತ್ರೆಗಳನ್ನು ಹಾಕಿಟ್ಟರೆ ಅದರಲ್ಲಿನ ಶಿವತತ್ತ್ವವು ಅವುಗಳಲ್ಲಿಯೂ ಸೇರುತ್ತದೆ.

**ಬಿಲ್ವಾರ್ಚನೆ** : ಓಂ ನಮಃ ಶಿವಾಯ' ಈ ಮಂತ್ರವನ್ನು ಜಪಿಸುತ್ತಾ ಅಥವಾ ಭಗವಾನ ಶಂಕರನ ಒಂದು ಹೆಸರನ್ನು ಉಚ್ಚರಿಸುತ್ತಾ ಒಂದೊಂದೆ ಬಿಲ್ವಪತ್ರೆಯನ್ನು ಶಿವಲಿಂಗಕ್ಕೆ ಅರ್ಪಿಸುವುದನ್ನು ಬಿಲ್ವಾರ್ಚನೆ ಎನ್ನುತ್ತಾರೆ. ಬಿಲ್ವಪತ್ರೆಗಳನ್ನು ಇಡೀ ಶಿವಲಿಂಗವು ಪೂರ್ತಿಯಾಗಿ ಮುಚ್ಚುವಂತೆ ಅರ್ಪಿಸಬೇಕು. ಬಿಲ್ವಪತ್ರೆಗಳನ್ನು ಮೂರ್ತಿಯ ಚರಣಗಳಿಂದ (ಲಿಂಗದ ಕೆಳಭಾಗದಿಂದ) ಅರ್ಪಿಸಲು ಪ್ರಾರಂಭಿಸಿ ಮೇಲ್ಬದಿಗೆ ಹೋಗಬೇಕು. ಇದರಿಂದ ಬಿಲ್ವಾರ್ಚನೆಯನ್ನು ಚರಣಗಳಿಂದ ಪ್ರಾರಂಭಿಸಿದ ಲಾಭವಾಗುತ್ತದೆ. ಅಲ್ಲದೇ ಬಿಲ್ವಪತ್ರೆಗಳನ್ನು ಸರಿಯಾಗಿ ಅರ್ಪಿಸಿ ಇಡೀ ಮೂರ್ತಿಯನ್ನು ಮುಚ್ಚಲು ಸಾಧ್ಯವಾಗುತ್ತದೆ. ಶಿವಪೂಜೆಯ ಕೆಲವು ವೈಶಿಷ್ಟ್ಯಗಳು ಮತ್ತು ಅವುಗಳ ಹಿಂದಿನ ಶಾಸ್ತ್ರ ಹೀಗಿದೆ.



● ಶಿವಪೂಜೆಯಲ್ಲಿ ಶಂಖದ ಪೂಜೆಯನ್ನು ಮಾಡುವುದಿಲ್ಲ ಮತ್ತು ಶಿವನಿಗೆ ಶಂಖದ ನೀರಿನಿಂದ ಅಭಿಷೇಕವನ್ನು ಮಾಡುವುದಿಲ್ಲ. ದೇವರ ಮೂರ್ತಿಯಲ್ಲಿ ಪಂಚಾಯತನದ ಸ್ಥಾಪನೆ ಇದ್ದರೆ, ಅದರಲ್ಲಿನ ಬಾಣಲಿಂಗದ ಮೇಲೆ ಶಂಖೋದಕ ವನ್ನು ಹಾಕಬಹುದು; ಆದರೆ ಮಹಾದೇವನ ಲಿಂಗವಿರುವ ಬಾಣಲಿಂಗಕ್ಕೆ ಶಂಖೋದಕದಿಂದ ಅಭಿಷೇಕ ಮಾಡಬಾರದು.'

**ಶಾಸ್ತ್ರ**: ಶಿವಲಿಂಗದಲ್ಲಿ ಪಾಣಿಪೀಠದ ರೂಪದಲ್ಲಿ ಸ್ತ್ರೀತತ್ತ್ವವು ಇರುವುದರಿಂದ ಸ್ತ್ರೀತತ್ತ್ವವಿರುವ ಶಂಖದಲ್ಲಿನ ನೀರನ್ನು ಮತ್ತೊಮ್ಮೆ ಹಾಕುವ ಅವಶ್ಯಕತೆಯಿರುವುದಿಲ್ಲ. ಬಾಣಲಿಂಗದ ಜತೆಗೆ ಪಾಣಿಪೀಠವು ಇಲ್ಲದಿರುವುದರಿಂದ ಅದಕ್ಕೆ ಶಂಖದ ನೀರಿನಿಂದ ಅಭಿಷೇಕವನ್ನು ಮಾಡುತ್ತಾರೆ.

● ದೇವಸ್ಥಾನದಲ್ಲಿ ಮಹಾದೇವನ ಪೂಜೆಯನ್ನು ಮಾಡುವಾಗ ಶಂಖಪೂಜೆ ಮಾಡುವುದು ಉಚಿತವಲ್ಲ; ಆದರೆ ಆರತಿಯ ಮೊದಲು ಮಾಡುವ ಶಂಖ ನಾದವು ಯೋಗ್ಯವಾಗಿದೆ ಮತ್ತು ಅದನ್ನು ಅವಶ್ಯವಾಗಿ ಮಾಡಬೇಕು.'

**ಶಾಸ್ತ್ರ**: ಶಂಖನಾದದಿಂದ ಪ್ರಾಣಾಯಾಮದ ಅಭ್ಯಾಸವಾಗುತ್ತದೆ; ಅಷ್ಟೇ ಅಲ್ಲದೇ ಶಂಖನಾದವು ಎಲ್ಲಿಯವರೆಗೆ ಕೇಳಿಸುತ್ತದೆಯೋ, ಅಲ್ಲಿಯವರೆಗೆ ಪರಿಸರದಲ್ಲಿ ಭೂತ, ಮಾಟ ಇತ್ಯಾದಿ ದುಷ್ಟಶಕ್ತಿಗಳ ತೊಂದರೆಯಾಗುವುದಿಲ್ಲ.

● ಶಿವನಿಗೆ ತುಳಸಿಯನ್ನು ಅರ್ಪಿಸುವುದಿಲ್ಲ; ಆದರೆ ಸಾಲಿಗ್ರಾಮಕ್ಕೆ ಅಥವಾ ವಿಷ್ಣು ವಿನ ಮೂರ್ತಿಗೆ ಅರ್ಪಿಸಿದ ತುಳಸಿಯನ್ನು ಶಿವನಿಗೆ ಅರ್ಪಿಸಬಹುದು.'

**ಶಾಸ್ತ್ರ** : ಶಿವನು ಶ್ರೀ ವಿಷ್ಣುವನ್ನು ಗುರು ರೂಪ ದಲ್ಲಿ ನೋಡುತ್ತಾನೆ. ಶಿವನು ವಿಷ್ಣು ಭಕ್ತನಾಗಿದ್ದಾನೆ; ಆದುದರಿಂದ ವಿಷ್ಣುವಿಗೆ ಅರ್ಪಿಸಿರುವ ತುಳಸಿಯು ಶಿವನಿಗೆ ಪ್ರಿಯವಾಗಿರುತ್ತದೆ.

● ಜ್ಯೇಷ್ಠ ಕೃಷ್ಣ ಅಷ್ಟಮಿಯಂದು ಶಂಕರನ ಪೂಜೆಯನ್ನು ಮತ್ತು ಚತುರ್ದಶಿಯಂದು ರೇವತಿಯ ಪೂಜೆಯನ್ನು ನೀಲಿ ಹೂವುಗಳಿಂದ ಮಾಡಬೇಕು. ಶಿವನಿಗೆ ಕೇದಗೆಯ ತುರಾಯಿಯನ್ನು ಮಹಾಶಿವ ರಾತ್ರಿಯ ವ್ರತದ ಉದ್ಯಾಪನೆಯ ಸಮಯ ದಲ್ಲಿಯೇ ಅರ್ಪಿಸಬೇಕು.'

**ಶಾಸ್ತ್ರ**: ಕಾಲಕ್ಕನುಸಾರ ದೇವತೆಗಳ ಪೂಜೆಯ ಸಾಮಗ್ರಿಗಳಲ್ಲಿ ಬದಲಾವಣೆಯಾಗುತ್ತದೆ, ಉದಾ. ಜ್ಯೇಷ್ಠ ಕೃಷ್ಣ ಅಷ್ಟ ಮಿಯ ದಿನ ನೀಲಿ ಬಣ್ಣದಲ್ಲಿ ಹಸಿರು ಬಿಲ್ವ ಪತ್ರೆಯಂತೆ ಶಿವತತ್ತ್ವವನ್ನು ಗ್ರಹಿಸುವ ಕ್ಷಮತೆ ಬರುತ್ತದೆ. ಆದುದರಿಂದ ಆ ದಿನ ಶಿವನಿಗೆ ನೀಲಿ ಹೂವುಗಳನ್ನು ಅರ್ಪಿಸುತ್ತಾರೆ.

● ಶಿವಲಿಂಗಕ್ಕೆ ಅರ್ಪಿಸಿದ ಬಿಲ್ವಪತ್ರೆ, ಬಿಳಿ ಹೂವು ಮತ್ತು ನೈವೇದ್ಯವನ್ನು ಸ್ವೀಕರಿಸಬಾರದು.'

**ಶಾಸ್ತ್ರ**: ಶಿವನು ವೈರಾಗ್ಯದ ದೇವತೆಯಾಗಿದ್ದಾನೆ. ಸಾಮಾನ್ಯ ವ್ಯಕ್ತಿಯು ಶಿವನಿಗೆ ಅರ್ಪಿಸಿದ ವಸ್ತುಗಳನ್ನು ಸ್ವೀಕರಿಸಿದರೆ ಅವನಿಗೆ ವೈರಾಗ್ಯ ಬರುವ ಸಾಧ್ಯತೆಯಿರುತ್ತದೆ. ಸಾಮಾನ್ಯ ವ್ಯಕ್ತಿಗೆ ವೈರಾಗ್ಯ ಬೇಕಾಗಿರುವುದಿಲ್ಲ. ಆದುದರಿಂದ ಶಿವಲಿಂಗಕ್ಕೆ ಅರ್ಪಿಸಿದ ವಸ್ತುಗಳನ್ನು ತೆಗೆದುಕೊಳ್ಳಬಾರದು ಎಂದು ಹೇಳಲಾಗಿದೆ. ಶೇ. 50 ಕ್ಕಿಂತ ಹೆಚ್ಚು ಮಟ್ಟವಿರುವ ವ್ಯಕ್ತಿಗೆ ಇದು ಅನ್ವಯಿಸುವುದಿಲ್ಲ, ಏಕೆಂದರೆ ಮಟ್ಟವು ಹೆಚ್ಚಿರುವುದರಿಂದ ವೈರಾಗ್ಯ ಲಹರಿಗಳ ಪರಿಣಾಮವು ಅವನ ಮೇಲಾಗುವುದಿಲ್ಲ. ಅವನಲ್ಲಿ ಮಾಯೆಯಿಂದ ದೂರ ಹೋಗುವ ವಿಚಾರ ಗಳು ಆಗಲೇ ಪ್ರಾರಂಭವಾಗಿರುತ್ತವೆ. ಅದರಂತೆ ಶೇ. 50 ಕ್ಕಿಂತ ಹೆಚ್ಚು ಮಟ್ಟವಿರುವ ವ್ಯಕ್ತಿಯು ಸ್ಥೂಲ ಕರ್ಮಕಾಂಡದ ಆಚೆಗೆ ಹೋಗಿರುವುದರಿಂದ ಅವನಲ್ಲಿ ಮಾನಸ-ಉಪಾಸನೆಯು ಪ್ರಾರಂಭವಾಗಿರುತ್ತದೆ. ಇಂತಹ ವ್ಯಕ್ತಿಯ ಮನಸ್ಸಿನಲ್ಲಿ ಶಿವನಿಗೆ ಅರ್ಪಿಸಿದ ವಸ್ತುಗಳನ್ನು ತೆಗೆದು ಕೊಳ್ಳಬೇಕು' ಎಂಬ ಕರ್ಮಕಾಂಡದ ವಿಚಾರ ಗಳು ಬರುವ ಸಾಧ್ಯತೆಗಳೇ ಕಡಿಮೆಯಿರುತ್ತವೆ.

● ಶೈವರು, ಕಾಪಾಲಿಕರು, ಗೋಸಾವಿ ಗಳು, ವೀರಶೈವ ಇತ್ಯಾದಿ ಸಂಪ್ರದಾಯದವರು ತಮ್ಮ-ತಮ್ಮ ಸಂಪ್ರದಾಯಕ್ಕನುಸಾರ ಪಾರ್ಥಿವಲಿಂಗ, ಕಂಠಸ್ಥಲಿಂಗ (ಕೊರಳಿನಲ್ಲಿ ಧರಿಸಿರುವ ಬೆಳ್ಳಿಯ ಪೆಟ್ಟಿಗೆಯಲ್ಲಿನ ಲಿಂಗ), ಸ್ಫಟಿಕಲಿಂಗ, ಬಾಣಲಿಂಗ,



ಪಂಚಸೂತ್ರಲಿಂಗ, ಪಾಷಾಣಲಿಂಗ ಇಂತಹ ವಿಧ ಲಿಂಗಗಳನ್ನು ಶಿವಪೂಜೆಯಲ್ಲಿ ಉಪಯೋಗಿಸುತ್ತಾರೆ.'

# ಇಲಾನ್ ಮಸ್ಕ್ ಎಂಬ ಧೀರನ ಸಾಹಸಗಾಥೆ

**ಸಾಗರೋತ್ತರ**



ಶಾಂತು ಶಾಂತಾರಾಮ್

shanthushantharam.org

ಕಳೆದ ವಾರ ಅಮೆರಿಕದಲ್ಲಿ ಒಂದು ಅದ್ಭುತ ಸಂಗತಿ ಜರುಗಿತು. ನಲವತ್ತೆಂಟು ವಯಸ್ಸಿನ ಇಲಾನ್ ಮುಸ್ಕ್ ಎಂಬಾತ ಒಂದು ರಾಕೆಟನ್ನು ಮರು-ಉಪಯೋಗಿಸುವಂತಹ ಬೂಸ್ಟರ್ ಜಗಲಿಗಳಿಂದ ತನ್ನ ಖಾಸಗಿ ಕಂಪನಿ spacex ತಯಾರಿಸಿ, ತನ್ನದೇ ಮತ್ತೊಂದು ಕಂಪನಿ Tesla ದ ಎಲೆಕ್ಟ್ರಿಕ್ ಕಾರಿನಲ್ಲಿ ಒಂದು ಬೊಂಬೆಯನ್ನು ಕೂರಿಸಿ ಬಾಹ್ಯಾಕಾಶಕ್ಕೆ ಉಡಾಯಿಸಿ ಗೆದ್ದೇಬಿಟ್ಟ. ಮೂರು ಬೂಸ್ಟರ್‌ಗಳ ರಾಕೆಟ್ ಅನ್ನು ಬಾಹ್ಯಾಕಾಶಕ್ಕೆ ಉಡಾಯಿಸಿ ಮತ್ತೆ ಭೂಮಿಗೆ ಬಂದುವು. ಅದರಲ್ಲಿ ಎರಡು ಬೂಸ್ಟರ್‌ಗಳು ಎಲ್ಲಿಂದ ಹಾರಿದ್ದವೋ ಮತ್ತೆ ಅದೇ ಜಾಗಕ್ಕೆ ಬಂದಿಳಿದವು, ಒಂದು ಮಾತ್ರ ಸಮುದ್ರಕ್ಕೆ ಬಿದ್ದು ಹೋಯಿತು. ಅದನ್ನೂ ಸಹ ಎತ್ತಿ ವಾಪಸ್ ತರಲಾಯಿತು. ಇದರಿಂದ ಪ್ರಮಾಣೀಕರಿಸಿದ್ದೇನಪ್ಪಾ ಅಂದರೆ ಬೂಸ್ಟರ್ ಜಗುಲಿಗಳನ್ನು ಮರು ಉಪಯೋಗಿಸಬಹುದೆಂದು ಸಾಬೀತುಪಡಿಸಿದ್ದು. ಅದಕ್ಕೆ ಸುಮಾರು 100 ಮಿಲಿಯನ್ ಡಾಲರ್ ನಷ್ಟು ಹಣ ವಿನಿಯೋಗಿಸಿದ್ದಾನೆ.

ಈ ಸಂಗತಿ ಜಗತ್ತಿನಾದ್ಯಂತ ಬಾಹ್ಯಾಕಾಶದಲ್ಲಿ ಆಸಕ್ತಿ ಉಳ್ಳವರೆಲ್ಲರನ್ನೂ ಚಕಿತಗೊಳಿಸಿದೆ. ಈತನ ಉದ್ದೇಶವೇನಪ್ಪಾ ಅಂದರೆ ಅಮೆರಿಕ ಸರಕಾರ ತನ್ನ ಬಾಹ್ಯಾಕಾಶ ಸಂಶೋಧನಾ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿಬಿಟ್ಟಿದೆ. ಈ ಕಾರಣದಿಂದಾಗಿ ಅಮೆರಿಕದಿಂದ ಬಾಹ್ಯಾಕಾಶ ಉಡಾವಣೆಯೇ ಆಗುತ್ತಿಲ್ಲ. ಹಾಗಾಗಿ ತಾನೇ ಖಾಸಗಿಯಾಗಿ ಯಾತಕ್ಕೆ ಬಾಹ್ಯಾಕಾಶ ಉಡಾವಣೆ ಮಾಡಬಾರದು ಎಂದು spacex ಎಂಬ ಕಂಪನಿಯನ್ನು ಆರಂಭಿಸಿದ. ಅಮೆರಿಕ ಸರಕಾರ ಬಾಹ್ಯಾಕಾಶ ಉಡಾವಣೆ ಮಾಡಬೇಕಾದರೆ ಬೇರೆ ದೇಶಗಳನ್ನಾಗಲೀ ಅಥವಾ ಬೇರೆ ದೇಶದ ಕಂಪನಿಗಳನ್ನು ಬೇಡಿಕೊಳ್ಳಬೇಕಾದ ಗತಿ ತಂದಿಟ್ಟುಕೊಂಡಿದೆ. ಮಸ್ಕ್ ನ ಆಸೆ ಅಂದರೆ, Nasa ಸಂಸ್ಥೆಯಿಂದ ಗುತ್ತಿಗೆ ಪಡೆದುಕೊಂಡು ಅತೀ ಕಡಿಮೆ ಖರ್ಚಿನಲ್ಲಿ ಬಾಹ್ಯಾಕಾಶ ಉಡಾವಣೆ ಮಾಡಿ ಹಣ ಸಂಪಾದಿಸುವುದು. ನಾಸಾ ಮಸ್ಕ್‌ಗೆ ಗುತ್ತಿಗೆ ನೀಡುವುದಕ್ಕೆ ಮುಂದೆ ಬಂದಿದೆ. ಬಾಹ್ಯಾಕಾಶ ಸಂಶೋಧನೆಯಲ್ಲಿಯೂ ಸಹ ಖಾಸಗಿ ಕಂಪನಿ ಕಟ್ಟಿಕೊಂಡು ವ್ಯವಹಾರ ಮಾಡಬಹುದೆಂದು ತೋರಿಸಿದ್ದಾನೆ ಧೀರ ಇಲಾನ್ ಮಸ್ಕ್.

ಇದಲ್ಲದೆ, ಇಲಾನ್ ಮಸ್ಕ್ Tesla ಎಂಬ ಬ್ಯಾಟರಿ ಎಲೆಕ್ಟ್ರಿಕ್ ಕಾರ್ ಕಂಪನಿಯ ಒಡೆಯ. ಈಗಾಗಲೇ Tesla ಕಾರನ್ನು ಮಾರುಕಟ್ಟೆಗೆ ತಂದಿದ್ದಾನೆ. ಆದರೆ, ಆ ಕಾರನ್ನು ಕಾರ್ ಡೀಲರ್‌ಗಳ ಮೂಲಕ ಮಾರಾಟ ಮಾಡುತ್ತಿಲ್ಲ. ಕೊಂಡುಕೊಳ್ಳಬೇಕಾದರೆ, ನೇರವಾಗಿ ಕಂಪನಿಯಿಂದಲೇ ಖರೀದಿಸಬೇಕು. ಬ್ಯಾಟರಿ ಎಲೆಕ್ಟ್ರಿಕ್ ಚಾರ್ಜ್ ಮಾಡುವುದಕ್ಕೆ ಚಾರ್ಜ್ ಮಾಡುವ ಸ್ಟೇಷನ್‌ಗಳನ್ನೂ ಎಲ್ಲಾ ಜಾಗಗಳಲ್ಲಿ ನಿರ್ಮಿಸುತ್ತಿದ್ದಾನೆ. ಮೊದ ಮೊದಲು ಉಚಿತವಾಗಿ ಬ್ಯಾಟರಿ ಚಾರ್ಜ್ ಮಾಡಬಹುದಾಗಿತ್ತು, ಆದರೆ ಇತ್ತೀಚೆಗೆ ಅದಕ್ಕೂ ದುಡ್ಡು ತೆರಬೇಕಾಗಿದೆಯಂತೆ. 45000 ಡಾಲರ್ ಕೊಟ್ಟು ಪೆಟ್ರೋಲ್‌ಗೆ ಆಗುವ ದುಡ್ಡು ಖರ್ಚು ಉಳಿಸಲು ಹೋದವರಿಗೆ ಇದು ಅಷ್ಟೊಂದು ಇಷ್ಟವಾಗುತ್ತಿಲ್ಲ. ಇನ್ನೂ ಈ Tesla ಕಾರುಗಳು ಅಷ್ಟು ಬಳಕೆಯಲ್ಲಿಲ್ಲ, ಆದರೆ ಒಂದಂತೂ ಸತ್ಯದ ಮಾತೆಂದರೆ ಎಲೆಕ್ಟ್ರಿಕ್ ಕಾರುಗಳು ಇನ್ನು ಸುಮಾರು ಹತ್ತು ವರುಷಗಳಲ್ಲಿ ಯಥೇಚ್ಛವಾಗಿ ಮಾರುಕಟ್ಟೆಗೆ ಬರಲಿವೆ ಹಾಗೂ ಪೆಟ್ರೋಲ್ ಕಾರುಗಳು ನಿಧಾನವಾಗಿ ಮಾಸಿ ಹೋಗಲಿವೆ. Solar city ಎಂಬ ಮತ್ತೊಂದು ಕಂಪನಿಯಿಂದ ಎಲೆಕ್ಟ್ರಿಕ್ ಪವರ್ ಸಪ್ಲೈ ಮಾಡುವುದಕ್ಕೆ ಆರಂಭಿಸಿದ್ದಾನೆ. ಈ Solar city ಎಂಬ ಕಂಪನಿಗೆ ಒಬಾಮ ಅಧ್ಯಕ್ಷರಾಗಿದ್ದಾಗ ಹಿಂದಿನ ಮಾಲಿಕರಿಗೆ 100 ಮಿಲಿಯನ್ ಡಾಲರ್ ಸರಕಾರೀ ಅನುದಾನ ನೀಡಿದ್ದರೂ ಸಹ ಅದು ದಿವಾಳಿ ಎದ್ದಿತ್ತು. ಅದೇ ದಿವಾಳಿ ಕಂಪನಿಯನ್ನು ಮಸ್ಕ್ ಖರೀದಿಸಿ ಅದರಿಂದ ವಿದ್ಯುಚ್ಛಕ್ತಿಯ ಹೊಸ ಶಕೆಯನ್ನೇ ಆರಂಭಿಸುವ ಕನಸು ಹೊಂದಿದ್ದಾನೆ. ಮಸ್ಕ್ 1995ರಲ್ಲಿ ಸ್ಟಾನ್ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಭೌತ ಶಾಸ್ತ್ರದಲ್ಲಿ ಡಾಕ್ಟರೇಟ್ ಡಿಗ್ರಿ ಓದುತ್ತಿದ್ದುದನ್ನು ತೊರೆದು zip2 ಎಂಬ ಸಾಫ್ಟ್‌ವೇರ್ ಕಂಪನಿ ತೆಗೆದ. ಅದರಿಂದ ಯಶಸ್ಸುಗಳಿಸಿ ಅದನ್ನು ಕಾಂಪ್ಯಾಕ್ ಕಂಪನಿಗೆ ಮುನ್ನೂರ ನಲವತ್ತು ಮಿಲಿಯನ್ ಡಾಲರಿಗೆ ಮಾರಿದ. ಅದಾದ ಮೇಲೆ, x.com ಎಂಬ ಮತ್ತೊಂದು ಆನ್ಲೈನ್ ಕಂಪನಿ ತೆಗೆದ. ಅದು paypal ಎಂಬ ಪ್ರತಿಷ್ಠಿತ ಕಂಪನಿಯೊಳಗೆ ಲೀನವಾಗಿ ಹೋಯಿತು. ಮತ್ತೆ ಅದನ್ನು ebay ಕಂಪನಿ 1.5 ಬಿಲಿಯನ್ ಡಾಲರ್‌ಗೆ ಕೊಂಡುಕೊಂಡಿತು. ಆ ಹಣದಿಂದ ಮೇ 2001 ರಲ್ಲಿ spacex ಎಂಬ ಕಂಪನಿ ಆರಂಭಿಸಿದ. 2003 ರಲ್ಲಿ Telsa ಕಾರ್ ಕಂಪನಿ ಆರಂಭಿಸಿದ. 2015 ರಲ್ಲಿ openAL ಎಂಬ ಕೃತಕ ಪ್ರಜ್ಞೆಯ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಕಂಪನಿ ಶುರು ಮಾಡಿದ್ದಾನೆ. ಮತ್ತೆ Neuralink ಎಂಬ ನರ ತಂತ್ರಜ್ಞಾನದ ಕಂಪನಿ ಶುರುಮಾಡಿ, ಅದರಿಂದ ಮೆದುಳಿಗೂ ಮತ್ತು ಕಂಪ್ಯೂಟರ್ ಮಧ್ಯೆ ಯಾವ ರೀತಿ ಜೋಡಿಸಿ ಮೆದುಳಿನ ಶಕ್ತಿಯನ್ನು ಹೆಚ್ಚಿಸಬಹುದು ಎಂಬುದನ್ನು 2016 ರಲ್ಲಿ ಶುರು ಮಾಡಿದ್ದಾನೆ. ಡಿಸೆಂಬರ್ 2016 ರಲ್ಲಿ ಟನಲ್ ಕೊರೆಯುವ The boring company ಎಂಬ ಕಂಪನಿಯನ್ನು ಆರಂಭಿಸಿದ.

Hyperloop ಎಂಬ ಅತ್ಯಂತ ವೇಗವಾಗಿ ಚಲಿಸುವ ಸಾರಿಗೆ ಕಂಪನಿಯನ್ನು ಮತ್ತು ಏರೋಪ್ಲೇನ್‌ಗಳು ನೇರವಾಗಿ ಹೆಲಿಕ್ಯಾಪ್ಟರ್ ತರಹ ಭೂಮಿಯಿಂದ ನೇರವಾಗಿ ಮೇಲೆ ಜಿಗಿದು ಫ್ಯಾನ್ ಗಳಿಂದ ಹಾರುವಂತಹ Musk electric jet ಅನ್ನು ತಯಾರಿಸುವ ಕನಸು ಕಾಣುತ್ತಿದ್ದಾನೆ. ಆತನ ಜೀವಮಾನದ ಉದ್ದೇಶವೆಂದರೆ ಭೂಮಿಯ ಅಧಿಕ ತಾಪಮಾನವನ್ನು ಕಡಿತಗೊಳಿಸುವುದು ಮತ್ತು ಮಾರ್ಸ್ ಗ್ರಹದ ಮೇಲೆ ಮನುಷ್ಯರು ಜೀವಿಸುವಂತಹ ವಾತಾವರಣ ನಿರ್ಮಿಸುವುದು. ಇಂದು ಇಲಾನ್ ಮಸ್ಕ್ 20 ಬಿಲಿಯನ್ ಡಾಲರ್ ಒಡೆಯ. ಇಲಾನ್ ಮಸ್ಕ್ ಇಂದು ಜಗತ್ತಿನ ಅತ್ಯಂತ ಶ್ರೀಮಂತರಲ್ಲಿ 53 ನೇ ಸ್ಥಾನದಲ್ಲಿದ್ದಾನೆ. ಮಸ್ಕ್ 2001 ರಲ್ಲಿ Mars ಓಯಸಿಸ್... ಎಂಬ ಯೋಜನೆಯನ್ನು ಕಲ್ಪಿಸಿಕೊಂಡು Mars ಮೇಲೆ ಒಂದು ಸಣ್ಣ ಹಸಿರು ಮನೆಯನ್ನು ನಿರ್ಮಿಸಿ ಅಲ್ಲಿ ಹಸಿರು ಗಿಡಗಳನ್ನು ಬೆಳೆಸಿ ಆಮ್ಲಜನಕವನ್ನು ಉತ್ಪಾದಿಸಿ ಮನುಷ್ಯರು ವಾಸ ಮಾಡುವುದಕ್ಕೆ ಮತ್ತೊಂದು ಗ್ರಹವನ್ನು ತಯಾರು ಮಾಡಲು ರಷ್ಯಾದಿಂದ ಒಂದು ನವೀಕರಿಸಿದ ಹಳೇ ಇಂಟರ್ಕಾಂಟಿನೆಂಟಲ್ ಬ್ಯಾಲಿಸ್ಟಿಕ್ ಮಿಸೈಲ್‌ಅನ್ನು ಕೊಳ್ಳಲು ಹೋಗಿದ್ದ. ರಷ್ಯಾದವರು ಅದಕ್ಕೆ 10 ಮಿಲಿಯನ್ ಡಾಲರ್ ಕೇಳಿದಾಗ ಬೇಸರಗೊಂಡು ಬರೀ ಕೈಯಲ್ಲಿ ಅಮೆರಿಕಕ್ಕೆ ವಾಪಸ್ಸಾದ. ಹಿಂದಿರುಗುವಾಗ ತಾನೇ ಯಾಕೆ ಒಂದು ಬಾಹ್ಯಾಕಾಶಕ್ಕೆ ಉಡಾಯಿಸುವ ಜನ ಸಾಮಾನ್ಯರಿಗೆ ಎಟಕುವ ರಾಕೆಟ್ ಅನ್ನು ತಯಾರಿಸಬಾರದು ಎಂದು ಯೋಚಿಸತೊಡಗಿದ. ಆ ಯೋಚನೆಯಿಂದ ಆರಂಭವಾದ ಕಂಪನಿಯೇ SpaceX. ಇದರ ಮುಖ್ಯ ಉದ್ದೇಶವೆಂದರೆ ನಿಜವಾಗಿಯೂ ಸಾಮಾನ್ಯ ಜನರು ಬಾಹ್ಯಾಕಾಶಕ್ಕೆ ಹೋಗಿ-ಬಂದು ಮಾಡುವಂತಹ ಸಾರಿಗೆ ಸಂಸ್ಥೆಯನ್ನು ಸ್ಥಾಪಿಸುವುದು. ತಾನೇ ತನ್ನ ಸ್ವಂತ 100



ಮಿಲಿಯನ್ ಡಾಲರ್ ಹಣವನ್ನು ಹೂಡಿದ. SpaceX ಬಾಹ್ಯಾಕಾಶ ನೌಕೆಗಳನ್ನು ತಯಾರಿಸಿ Falcon1 ಮತ್ತು Falcon9 ಎಂಬ ರಾಕೆಟ್‌ಗಳನ್ನು ಉಡಾಯಿಸಿತು. 2012ರಲ್ಲಿ SpaceX ಡ್ರ್ಯಾಗನ್ ಎಂಬ ಬಾಹ್ಯಾಕಾಶ ನೌಕೆಯನ್ನು ಉಡಾಯಿಸಿ, ಪ್ರಪಂಚದಲ್ಲಿಯೇ ಪ್ರಥಮ ವಾಣಿಜ್ಯ ಉಡಾವಣ ವ್ಯವಹಾರವನ್ನು ಆರಂಭಿಸಿತು. ಇದರಿಂದ ಇಂಟರ್‌ನ್ಯಾಷನಲ್ ಸ್ಪೇಸ್ ಸ್ಟೇಷನ್‌ಗೆ ಒಂದು ತಂಗುದಾಣವನ್ನು ತಲುಪಿಸಿತು. ಇದರಿಂದಾಗಿ ಅಮೆರಿಕದ ಫೆಡರಲ್ ಸಂಸ್ಥೆ SpaceX ಕಂಪನಿಗೆ ಉಡಾವಣ ಗುತ್ತಿಗೆಯನ್ನು ನೀಡಿತು. SpaceX 2017ರಲ್ಲಿ ಹದಿನೆಂಟು ರಾಕೆಟ್‌ಗಳನ್ನು ಉಡಾಯಿಸಿದೆ.

ಮಸ್ಕ್ Mars ಗ್ರಹದಲ್ಲಿ ಹತ್ತಿಪ್ಪತ್ತು ವರುಷಗಳಲ್ಲಿ ಮನುಷ್ಯರ ಕಾಲೋನಿ ಸ್ಥಾಪಿಸುವ ಕನಸು ಹೊತ್ತಿದೆ. ಐಸಾಕ್ ಅಸಿಮೋವ್ ಫೌಂಡೇಶನ್ ನವರು ಹೇಳುವಂತೆ, ಇಲಾನ್ ಮಸ್ಕ್ ಹಲವಾರು ಗ್ರಹಗಳ ಮೇಲೆ ಮನುಷ್ಯನು ಬದುಕುವಂತೆ ಮಾಡುವುದು ಯಾಕೆಂದರೆ ಒಂದಲ್ಲಾ ಒಂದು ದಿನ ಈ ಭೂಗ್ರಹದಲ್ಲಿ ಜನಗಳು ಬದುಕಲಾರದಷ್ಟು ಜನಸಂಖ್ಯೆ ಉಂಟಾದರೆ ಬೇರೆ, ಬೇರೆ ಗ್ರಹಗಳಲ್ಲಿ ಹೋಗಿ ವಾಸಿಸುವ ವ್ಯವಸ್ಥೆ ಮಾಡುವ ಕನಸು ಕಾಣುತ್ತಿದ್ದಾನೆ.

ಇಲಾನ್ ಮಸ್ಕ್ ದಕ್ಷಿಣ ಆಫ್ರಿಕಾದ ಪ್ರಿಟೋರಿಯಾದಲ್ಲಿ ಜೂನ್ 28, 1971 ರಲ್ಲಿ ಜನ್ಮ ತಾಳಿದ. ಪ್ರಸ್ತುತ ಅಮೆರಿಕ ಮತ್ತು ಕೆನಡಾದ ಪ್ರಜೆ. ಕೆನಡಾದ ಕ್ವೀನ್ಸ್ ವಿಶ್ವವಿದ್ಯಾಲಯದಲ್ಲಿ ಮತ್ತು ಅಮೆರಿಕದ ಪೆನ್ಸಿಲ್ವೇನಿಯ ವಿಶ್ವವಿದ್ಯಾಲಯದ ಭೌತ ಶಾಸ್ತ್ರದಲ್ಲಿ ಪದವಿ ಪಡೆದು, ಆಮೇಲೆ ಪ್ರತಿಷ್ಠಿತ ವಾರ್ಟನ್ ಬಿಸಿನೆಸ್ ಸ್ಕೂಲಿನಿಂದ MBA ಪದವಿ ಪಡೆದ. ಚಿಕ್ಕ ವಯಸ್ಸಿನಲ್ಲಿ ಓದುವುದರಲ್ಲಿ ಅತಿ ಆಸಕ್ತಿ ಉಳ್ಳವನಾಗಿದ್ದನಂತೆ. ತನ್ನ ಬ್ಯಾಚುಲರ್ ಡಿಗ್ರಿ ಓದುವ ಸಮಯದಲ್ಲಿ ತನ್ನ ಸಹಪಾಠಿ ಅಡಿರೆಸ್ಸಿ ಎನ್ನುವನ ಜತೆಗೂಡಿ, ಒಂದು ಹತ್ತು ರೂಮಿನ ಬಂಗಲೆಯನ್ನು ಬಾಡಿಗೆಗೆ ಪಡೆದು ಒಂದು ನೈಟ್ ಕ್ಲಬ್ಬನ್ನು ಶುರು ಮಾಡಿದ್ದ. ಇಲಾನ್ ಮಸ್ಕ್ ತಾನು ಅರ್ಧ ಡೆಮಾಕ್ರೆಟಿಕ್, ಅರ್ಧ ರಿಪಬ್ಲಿಕನ್ ಅಂತ ಹೇಳಿಕೊಳ್ಳುತ್ತಾನೆ. ಹಾಗೆಂದರೆ ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ, ತನಗೆ ಯಾವ ತೊಂದರೆಯಾಗದಿರಲಿ ಅಂತ. ಸಾಮಾಜಿಕವಾಗಿ ಪ್ರಗತಿಶೀಲ, ಆದರೆ ಹಣಕಾಸಿನ ವಿಚಾರದಲ್ಲಿ ಕಟು ಸಾಂಪ್ರದಾಯಿಕ ಮನುಷ್ಯ ಅಂತ ಬಣ್ಣಿಸಿಕೊಳ್ಳುತ್ತಾನೆ. ಅಂದರೆ ಜಿಪುಣ ಎಂದರ್ಥವಾದಂತಾಯಿತು. ಇಲಾನ್ ಮಸ್ಕ್ ಡೊನಾಲ್ಡ್ ಟ್ರಂಪ್ ಸರಕಾರದಲ್ಲಿ ಕೌಶಲ್ಯ ನೀತಿ-ನಿಯಮ ಕಮಿಟಿಗೆ ಸದಸ್ಯನಾಗಿ ಸೇರಿಕೊಂಡಿದ್ದ. ಆದರೆ ಯಾವಾಗ ಟ್ರಂಪ್ ಪ್ಯಾರಿಸ್ ಪರ್ಯಾವರಣ ಒಪ್ಪಂದದಿಂದ ಅಮೆರಿಕದ ಸದಸ್ಯತ್ವವನ್ನು ಹಿಂದೆಗೆದುಕೊಂಡನೋ ತಕ್ಷಣ ಮಸ್ಕ್ ಕಮಿಟಿಗೆ ರಾಜಿನಾಮೆ ಕೊಟ್ಟುಬಿಟ್ಟ. ಕಾರಣ ಮಸ್ಕ್ ಪರ್ಯಾವರಣದ ಮೇಲೆ ಅತ್ಯಂತ ಕಾಳಜಿ ಉಳ್ಳವನು. ಮಸ್ಕ್ ಪ್ರಕಾರ ಅಮೆರಿಕ ದೇಶ ಜಗತ್ತಿನಲ್ಲಿ ಹಿಂದೆಂದೂ ಯಾರೂ ಕಾಣದ ಅತ್ಯದ್ಭುತ ದೇಶ ಎಂದು ನಂಬುತ್ತಾನೆ.

ಸ್ವಯಂ ಚಲಾಯಿತ ಕಾರನ್ನು ಮಾರುಕಟ್ಟೆಗೆ ತರುವ ಕನಸನ್ನು ಹೊಂದಿದ್ದಾನೆ. ಆದರೆ ಬೇರೆ, ಬೇರೆ ಕಾರು ತಯಾರಕರು ಮಸ್ಕ್‌ಗಿಂತ ಸ್ವಯಂ ಚಲಾಯಿತ ಕಾರನ್ನು ತಯಾರಿಸುವುದರಲ್ಲಿ ಬಹಳ ಮುಂದಿದ್ದಾರೆ. ಇಲಾನ್ ಮಸ್ಕ್ ವಾಷಿಂಗ್ಟನ್ ಡಿಸಿಯಲ್ಲಿ ಅಮೆರಿಕ ಸರಕಾರದ ಬಹು ಪ್ರತಿಭಾನ್ವಿತ ಲಾಬಿ ಮಾಡುವ ಕಚೇರಿ ತೆಗೆದಿದ್ದಾನೆ ಮತ್ತು ಅತ್ಯಂತ ದಾನಿಯಾಗಿ ಡೆಮಾಕ್ರೆಟಿಕ್ ಮತ್ತು ರಿಪಬ್ಲಿಕನ್ ಪಕ್ಷಕ್ಕೆ ಸಾವಿರಾರು ಡಾಲರ್ ದೇಣಿಗೆಯನ್ನು ನೀಡುತ್ತಿರುತ್ತಾನೆ. ಏನೇ ಆಗಲಿ , ಇಲಾನ್ ನಿಜವಾಗಿಯೂ ಒಬ್ಬ ಅದ್ಭುತ ಕನಸುಗಾರ ಮತ್ತು ಧೀರ. ಯಾರು ಮಸ್ಕ್ ಕಾಣುವ ಕನಸುಗಳನ್ನು ಕಾಣಲೂ ಹೆದರುತ್ತಾರೋ, ಅದೇ ಕನಸುಗಳನ್ನು ಬಹಿರಂಗವಾಗಿ ಹೇಳಿ, ಆ ಕನಸುಗಳನ್ನು ನನಸಾಗುವುದಕ್ಕೆ ಧೈರ್ಯದಿಂದ ಹಣ ಹೂಡಿ ಮುನ್ನುಗ್ಗುತ್ತಾನೆ. ಈ ತರಹದ ಕನಸು ಕಾಣುವ ಕನಸುಗಾರರಿಗೆ ಜಗತ್ತಿನಲ್ಲಿ ಉತ್ತೇಜನ ಕೊಡುವ ದೇಶವೆಂದರೆ ಇಂದಿಗೂ ಅಮೆರಿಕ ದೇಶವೇ ಸರಿ.

# ದೀರ್ಘಾಯಸ್ಸು ವರವಲ್ಲ! ಅದೊಂದು ಶಾಪ!

**ಕ್ಷಣ ಹೊತ್ತು ಆಣಿ ಮುತ್ತು**



ಎಸ್.ಷಡಕ್ಷರಿ

editoped@vishwavani.news

ನಾವೆಲ್ಲಾ ಗಮನಿಸಿದ್ದೇವಲ್ಲವೇ? ನಾವು ಯಾರಾದರು ಹಿರಿಯರಿಗೆ ನಮಸ್ಕರಿಸಿದಾಗ ಅವರು ದೀರ್ಘಾಯುಷ್ಮಾನ್ ಭವ ಎಂದು ಆಶೀರ್ವದಿಸುತ್ತಾರಲ್ಲವೇ? ನಾವೂ ಸಂತಸ ಪಡುತ್ತೇವಲ್ಲವೇ? ಆದರೆ ದೀರ್ಘಾಯಸ್ಸು ಒಂದು ವರವಲ್ಲ, ಅದೊಂದು ಶಾಪ ಎಂಬ ಮಾತುಗಳನ್ನು ಕೇಳಿದರೆ ವಿಚಿತ್ರ ಅನಿಸುತ್ತದಲ್ಲವೇ? ಈ ಮಾತುಗಳನ್ನು ನಿಜವೆಂದು ಬಿಂಬಿಸುವ, ನಂಬಿಸುವ, ಗ್ರೀಸ್ ದೇಶದ ಪೌರಾಣಿಕ ಕತೆಯೊಂದು ಇಲ್ಲಿದೆ.

ಅರೋರ ಎಂಬಾಕೆ ಗ್ರೀಸ್ ದೇಶದ ಜನರ ನಂಬಿಕೆಯ ಪ್ರಕಾರ ಅವರ ಮುಂಜಾನೆಯ ದೇವತೆ! ಒಂದು ಮುಂಜಾನೆ ಆಕೆ ಭೂಲೋಕದಲ್ಲಿ ಸಂಚರಿಸುತ್ತಿದ್ದಳಂತೆ. ಆಗ ಟಿಥೋನಸ್ ಎಂಬ ಮಾನವನನ್ನು ಕಂಡಳಂತೆ. ಆತ ಆಜಾನುಬಾಹು, ತಿದ್ದಿ ಮಾಡಿದಂತಹ ದೇಹದ ಸುಂದರ.

ಆಕೆಗೆ ಮೊದಲ ನೋಟದಲ್ಲೇ ಆತನಲ್ಲಿ ಪ್ರೇಮಾಂಕುರ. ಆತನೊಂದಿಗೆ ಬಾಳುವುದಕ್ಕಾಗಿ ಆಕೆ ದೇವಲೋಕವನ್ನೂ ಬಿಟ್ಟು ಬರಲು ಸಿದ್ಧರಾಗಿಬಿಟ್ಟರು. ಆದರೆ ದೇವಲೋಕದವರೆಲ್ಲ ಆಕೆಗೆ ನೀನು ದುಡುಕುತ್ತಿದ್ದೀಯ. ನೀನು ಮರಣವೇ ಇಲ್ಲದ ದೇವತೆ. ಆದರೆ ಆತ ಮುಂದೊಂದು ದಿನ ಸಾಯುವ ಮಾನವ. ನಿಮ್ಮಿಬ್ಬರ ವಿವಾಹ ಹೇಗೆ ಸಾಧ್ಯ? ಎಂದು ಎಚ್ಚರಿಸಿದರು. ಆದರೆ ಪ್ರೇಮ ಕುರುಡಲ್ಲವೇ? ಭಾರತ ದೇಶವಾದರೇನು? ಗ್ರೀಸ್ ದೇಶವಾದರೇನು? ಆಕೆ ಆತನನ್ನೇ ವರಿಸುವ ತೀರ್ಮಾನ ಮಾಡಿಬಿಟ್ಟಿದ್ದಳು. ಆಯಸ್ಸಿನದ್ದೊಂದೇ ಸಮಸ್ಯೆ ಎಂದು ಪರಿಗಣಿಸಿದ ಆಕೆ ಅವರ ದೇವರಾದ ಜೂಯೆಸ್ ಅವರನ್ನು ಕುರಿತು ಕಠಿಣವಾದ ತಪಸನ್ನಾಚರಿಸಿದಳು.

ದೇವರು ಪ್ರತ್ಯಕ್ಷವಾದಾಗ ನಾನು ಪ್ರೀತಿಸಿ ಮದುವೆಯಾಗುತ್ತಿರುವ ಟಿಥೋನಸ್ ಮಾನವನಿಗೆ ಮರಣವೇ ಬಾರದಂತಹ ವರವನ್ನು ಕೊಡು ಎಂದು ಬೇಡಿಕೊಂಡಳು. ದೇವರು ಕೊಂಚ ಯೋಚಿಸಿ ನೀನು ಕೋರುವ ವರ ಇಷ್ಟೇನಾ? ಮತ್ತೇನು ಇಲ್ಲವೇ? ಯೋಚಿಸಿ ಹೇಳು ಎಂದು ಕೇಳಿದರು. ಆಕೆ ಖಡಾಖಂಡಿತವಾಗಿ ಅವನೆಂದೂ ಸಾಯದಂತಹ ವರವನ್ನು ಕೊಟ್ಟರೆ ಸಾಕು ಎಂದಳು. ದೇವರು ತಥಾಸ್ತು, ಆತನಿಗಿನ್ನು ಮರಣವೇ ಇಲ್ಲ! ಎಂದು ಹೇಳಿ ಅಂತರ್ದಾನರಾದರು. ಟಿಥೋಟಸ್ ಮತ್ತು ಅರೋರ ಅವರಿಬ್ಬರು ಮದುವೆಯಾದರು. ಸಾಂಸಾರಿಕ ಜೀವನವನ್ನಾರಂಭಿಸಿದರು. 'ನಮ್ಮ ಸಂಸಾರ, ಆನಂದ ಸಾಗರ' ಎನ್ನುವಂತಹ ಸಂಸಾರ!

ಆದರೆ ಅವರಿಗೆ ಇಪ್ಪತ್ತು-ಮೂವತ್ತು ವರ್ಷಗಳ ನಂತರ ಸಮಸ್ಯೆ ಎದುರಾಯಿತು. ಅದೇನೆಂದರೆ ಆಕೆ ದೇವತೆ. ಆಕೆಗೆ ಸಾವು ಬರುವಂತಿರಲಿಲ್ಲ. ಹಾಗೆಯೇ ಮುಪ್ಪೂ ಬರುವಂತಿರಲಿಲ್ಲ. ಆದರೆ ಆಕೆಯ ಪತಿ ಮನುಷ್ಯನಾದ್ದರಿಂದ, ಆತನಿಗೆ ನಿಧಾನವಾಗಿ ಮುಪ್ಪು ಬರತೊಡಗಿತು. ಕಣ್ಣುಗಳು ಮಂಜಾಗತೊಡಗಿದವು. ಕಿವಿ ಕೇಳಿಸುವುದು ಕಡಿಮೆಯಾಯಿತು. ಚರ್ಮ ಸುಕ್ಕಾಗತೊಡಗಿತು. ವೃದ್ಧಾಪ್ಯ-ಸಹಜವಾದ ಕಾಯಿಲೆಗಳು ಬರತೊಡಗಿದವು. ಆಗ ಅರೋರ ಹೌಹಾರಿದಳು. ತನ್ನ ಪತಿಗೆ ಮರಣವೇ ಇಲ್ಲದ ವರವನ್ನು ಕೇಳಿಕೊಂಡಿದ್ದಳು. ಆದರೆ ಆತ ಸದಾ ಯುವಕನಾಗಿರಬೇಕೆಂಬ, ಆರೋಗ್ಯವಂತನಾಗಿರಬೇಕೆಂಬ ವರವನ್ನು ಕೇಳಿಕೊಂಡಿರಲಿಲ್ಲ! ವರ್ಷಗಳು ಕಳೆದಂತೆಲ್ಲ ಟಿಥೋನಸನನ ದೇಹ ಕ್ಷೀಣಿಸ ತೊಡಗಿತು. ಕಾಯಿಲೆಗಳಿಂದ ನರಳತೊಡಗಿದ. ಸಹಿಸಲಾಗದ ನೋವುಗಳು. ಆದರೆ ಮರಣ ಬರುವಂತಿಲ್ಲ. ನರಳುವಿಕೆಗೆ ಕೊನೆಯೇ ಇರಲಿಲ್ಲ. ಅವನ ದುರವಸ್ಥೆಯನ್ನು ನೋಡಲಾಗದೆ ಅರೋರ ಮತ್ತೆ ದೇವರನ್ನು ಪ್ರತ್ಯಕ್ಷ ಮಾಡಿಕೊಂಡು, ಆತನಿಗೆ ಮರಣ ಬರಲಿ! ನರಳುವಿಕೆ ಕೊನೆಯಾಗಲಿ ಎಂದು ಕೇಳಿಕೊಂಡಳು. ಆದರೆ ದೇವರು ಆತನಿಗೆ ಮರಣವೇ ಬಾರದಂತಹ ವರವನ್ನು ಕೊಟ್ಟಾಗಿದೆ. ಈಗ ಆತ ಮರಣಕ್ಕೊಳಗಾಗುವಂತೆ ಮಾಡಲು ನನಗೂ ಸಾಧ್ಯವಿಲ್ಲ ಎಂದು ಹೇಳಿ ಅಂತರ್ಧಾನರಾದರಂತೆ.

ಈ ಪ್ರಸಂಗ ನಡೆದು ಸಾವಿರಾರು ವರ್ಷಗಳಾದರೂ ಇಂದಿಗೂ ಟಿಥೋನಸ್ ಮರಣಹೊಂದಿಲ್ಲವಂತೆ!ಆದರೆ ಆತನ ನರಳುವಿಕೆ ನಿಂತಿಲ್ಲವಂತೆ!

ಮರಣವೇ ಬಾರದ ವರವನ್ನು ಕೇಳುವುದಕ್ಕಿಂತ, ಮರಣ ಬರುವವರೆಗೂ ಆರೋಗ್ಯವಾಗಿರುವಂತೆ ಕೇಳಿಕೊಳ್ಳಬೇಕಲ್ಲವೇ? ಎಷ್ಟೇ ಸಿರಿ-ಸಂಪತ್ತು, ಆಸ್ತಿ-ಅಂತಸ್ತು, ಧನ-ದೌಲತ್ತು ಇದ್ದರೂ, ಅದನ್ನನುಭವಿಸಲು ಆರೋಗ್ಯ ಇರಬೇಕಲ್ಲವೇ? ಆರೋಗ್ಯ ಇಲ್ಲದಿದ್ದರೆ, ದೀರ್ಘಾಯಸ್ಸು ಒಂದು ವರವಲ್ಲ, ಅದೊಂದು ಶಾಪ ಎಂಬುದು ನಿಜ ಅನಿಸುವುದಿಲ್ಲವೇ?